ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಸಚಿವಾಲಯ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ     ದಿನಾಂಕ : DATE : 24/12/2019

# ಮರುನೇಮಕಕ್ಕೆ ಮೂರ್ತಿ ಮನವಿ

ಪ್ರಜಾವಾಣಿ ವಾರ್ತೆ     24/12/2019

ಬೆಂಗಳೂರು: 'ಹೈಕೋರ್ಟ್ ತೀರ್ಪಿನಲ್ಲಿ ನೀಡಿರುವ ಸೂಚನೆ ಮತ್ತು ಸರ್ಕಾರಿ ನೌಕರರ ನೇಮಕಾತಿ ಪ್ರಾಧಿಕಾರಗಳಿಗೆ ಇರುವ ಅಧಿಕಾರ ವ್ಯಾಪ್ತಿಯಡಿ ನನ್ನನ್ನು ಸೇವೆಗೆ ಪುನರ್ ನೇಮಕ ಮಾಡಬೇಕು' ಎಂದು ಕೋರಿ ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿಯಾಗಿದ್ದ ಎಸ್.ಮೂರ್ತಿ (ಸದ್ಯ ಅಮಾನತ್ತಿನಲ್ಲಿದ್ದಾರೆ) ರಾಜ್ಯ ವಿಧಾನಸಭೆ ಸಚಿವಾಲಯದ ವಿಶೇಷ ಮಂಡಳಿಗೆ ಮನವಿ ಸಲ್ಲಿಸಿದ್ದಾರೆ.

ತಮ್ಮ ಅಮಾನತು ಪ್ರಶ್ನಿಸಿ ಮೂರ್ತಿ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಅಭಯ್ ಎಸ್.ಓಕಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಇದೇ 19ರಂದು ವಜಾಗೊಳಿಸಿತ್ತು.

ತೀರ್ಪಿನಲ್ಲಿ ನ್ಯಾಯಪೀಠವು, 'ಇಲಾಖೆ ಅಥವಾ ಶಿಸ್ತುಸಮಿತಿ ವಿಚಾರಣೆ ನಡೆಸದೆ ಅರ್ಜಿದಾರರನ್ನು ದೀರ್ಘಕಾಲದವರೆಗೆ ಅಮಾನತಿನಲ್ಲಿ ಇರಿಸಲು ಸಾಧ್ಯವಿಲ್ಲ. ಪ್ರತಿವಾದಿಗಳು ಸಕಾಲದಲ್ಲಿ ಇಲಾಖೆ ಅಥವಾ ಶಿಸ್ತುಸಮಿತಿ ವಿಚಾರಣೆ ಕೈಗೊಳ್ಳುವಲ್ಲಿ ವಿಫಲವಾಗಿದ್ದಾರೆ. ಆದ್ದರಿಂದ ಸೂಕ್ತ ಸಮಯದೊಳಗೆ ಇಲಾಖೆ ಅಥವಾ ಶಿಸ್ತುಸಮಿತಿ ವಿಚಾರಣೆ ಕೈಗೊಳ್ಳದೇ ಹೋದರೆ ಅರ್ಜಿದಾರರು ಹೊಸದಾಗಿ ರಿಟ್ ಅರ್ಜಿ ಸಲ್ಲಿಸಿ ನ್ಯಾಯ ಕೋರಲು ಸ್ವತಂತ್ರರಿದ್ದಾರೆ' ಎಂದಿದೆ.

**ಪ್ರಕರಣವೇನು?:** '2016 ಹಾಗೂ 2017ನೇ ಸಾಲಿನಲ್ಲಿ ಬೆಳಗಾವಿಯಲ್ಲಿ ನಡೆದ ಅಧಿವೇಶನಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲಾದ ಕಾಮಗಾರಿ ಹಾಗೂ ಇತರೆ ಖರ್ಚು ವೆಚ್ಚಗಳಲ್ಲಿ ಅವ್ಯವಹಾರ ನಡೆಸಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿರುವ ವಿಶೇಷ ಮಂಡಳಿಯ ಆದೇಶದ ಅನುಸಾರ ಎಸ್.ಮೂರ್ತಿ ಅವರನ್ನು 2018ರ ಡಿಸೆಂಬರ್ 27ರಿಂದ ಸೇವೆಯಿಂದ ಅಮಾನತಿನಲ್ಲಿ ಇರಿಸಲಾಗಿದೆ.